Alleged Mismanagement in some Multi-purpose Co-operative Societies in Krishnarajanager Taluk.

*ಪ್ರಶ್ನೆ 123.—ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) 1950ನೆಯ ಇಸವಿ ಜನವರಿ 1ನೆಯ ತಾರೀಖಿನಲಾಗಾಯಿತು 1951ನೆಯ ಇಸವಿ ಜನವರಿ 1ನೆಯ ತಾರೀಖಿನವರೆಗೆ ಕೃಷ್ಣರಾಜನಗರ ತಾಲ್ಲೂಕಿನ ಸಮಗ್ರಸೇವಾ ಪರಸ್ಪರ ಸಹಾಯ ಸಂಘಗಳಿಗೆ ಸರ್ಕಾರದವರು ಸರಬರಾಯಿ ಮಾಡಿದ ಅಕ್ಕಿ ಮತ್ತು ಸಕ್ಕರೆ ಪರಿಮಾಣಗಳೆಷ್ಟು;

(b) ರಿಜಿಸ್ಟರಿನಲ್ಲಿ ಮತ್ತು ರೇಷನ್ ಕಾರ್ಡುಗಳಲ್ಲಿರುವ ಖತಾಯಿತಿಗಳ ಪ್ರಕಾರ ಸರಬರಾಯಿ ಮಾಡಿದ ಅಕ್ಕಿ ಮತ್ತು ಸಕ್ಕರೆ ಪರಿಮಾಣಗಳೆಷ್ಟು (ವ್ಯತ್ಯಾಸವನ್ನು ತೋರಿಸಬೇಕು);

(c) ಈ ಡಿಪೋಗಳಲ್ಲಿ ಸರಿಯಾದ ಆಡಳಿತ ಕ್ರಮವಿಲ್ಲವೆನ್ನುವ ಸಂಬಂಧದಲ್ಲಿ ಸರ್ಕಾರದವರಿಗೆ ಎಷ್ಟು ದೂರುಗಳು ಬಂದಿವೆ ಮತ್ತು ಅವುಗಳ ಮೇರೆ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮವೇನು?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

		ಪಲ್ಲಗಳು	ಸೇರುಗಳು
(a)	(i) ಅಕ್ಕಿ	5,161	55
	(ii) ಸಕ್ಕರೆ	1,130	ಚೀಲಗಳು

(b) ಮೇಲೆ ತಿಳಿಸಿರುವ ಹಾಗೆ ಇದೆ. 7 ಪಲ್ಲ ಮತ್ತು 7 ಸೇರುಗಳ ಅಕ್ಕಿಯ ವ್ಯತ್ಯಾಸವೂ ಮತ್ತು 4 ಮಣ ಸಕ್ಕರೆಯ ವ್ಯತ್ಯಾಸವೂ ಕಂಡುಬಂದಿದೆ.

(c) ಕನಬಾ ಸರ್ಕಲಿನ ಸಮಗ್ರಸೇವಾ ಪರಸ್ಪರ ಸಹಾಯ ಸಂಘದ ಮೇಲೆ, ಎಫಿಷಿಯರ್ಸಿ ಡೈರೆಕ್ಟರವರಿಗೆ ಒಂದು ದೂರು ಬಂದಿದ್ದಿತು. ಈ ವಿಷಯದಲ್ಲಿ ತಪಶೀಲು ಪರಿಶೀಲನೆ ನಡೆಯುತ್ತಿದೆ. ಮಾರಾಟದ ಡಿಪೋವಿನ ಗುಮಾಸ್ತರನ್ನು 'ಸಸ್ಪೆಂಡ್' ಮಾಡಲಾಗಿದೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಈ ಸಮಗ್ರಸೇವಾ ಪರಸ್ಪರ ಸಹಾಯ ಸಂಘದಲ್ಲಿ ಕೆಲಸ ಕಾರ್ಯಮಾಡತಕ್ಕವರ ಮೇಲೆ ದೂರುಬಂದಿತ್ತು ಎಂದು ಹೇಳಿರುತ್ತೀರಿ. ಅದು ಯಾವತರಹದ ದೂರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಟಾಕ್, ವಗೈರೆ ರೆಕ್ಕ ಪತ್ರಗಳಲ್ಲ ವ್ಯತ್ಯಾಸವಿದೆ ಎಂದು ದೂರು ಬಂದಿತ್ತು. ತಕ್ಷಣ ಚೆಕ್ ಮಾಡಲಾಗಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಆ ಸಂಘದಲ್ಲಿ ರೇಷನ್ ಕಾರ್ಡುಗಳ ಮೇಲೆ ಸುಳ್ಳು ಲೆಕ್ಕ ತೋರಿಸಿ ಅನೇಕವೇಳೆ ಸಕ್ಕರೆ, ಅಕ್ಕಿ issue ಆಗುತ್ತಾ ಇತ್ತು ಎಂಬುದು ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವ್ಯತ್ಯಾಸ ಇದ್ದದ್ದು 7 ಪಲ್ಲಾ 7 ಸೇರು. ಆದ್ದರಿಂದ ಅನೇಕವೇಳೆ ಎಂದು ಹೇಳುವುದು ಕಷ್ಟ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—1,130 ಚೀಲ ಸಕ್ಕರೆಯಲ್ಲಿ ಬಹುಭಾಗದ ಚೀಲಗಳು ಮೈಸೂರಿನಲ್ಲಿ ವಿರೇವಾರಿಯಾಗಿತ್ತು ಎಂಬುದಾಗಿ ದೂರು ಬಂದಿರುವುದು ನಿಜವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಬಂದಿಲ್ಲ. Mis-manage ಆಗಿದೆಯೆಂದು ದೂರು ಬಂದಿತ್ತು. ಎಫಿಷಿಯರ್ಸಿ ಆಡಿಟ್‌ನವರಿಂದ ಚೆಕ್ ಆಫ್ ಮಾಡಿಸಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—

The sales depot clerk is kept under suspension ಎಂದು ಹೇಳಿದ್ದೀರಿ. ಅದಕ್ಕೆ ಇದ್ದಂಥ ಮಹತ್ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರ ಕೊಟ್ಟಿದೆ. ಸ್ಟಾಕ್ ಎಚಾರದಲ್ಲಿ ದೂರು ಬಂತು. ಎಫಿಷಿಯರ್ಸಿ ಆಡಿಟ್‌ನವರು ಚೆಕ್ ಮಾಡಿದರು. ಅವರ ಶಿಫಾರಸಿನ ಮೇಲೆ .....

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಸ್‌ಪೆಂಡ್ ಮಾಡುವುದಕ್ಕೆ ಕಾರಣವೇನು ಎಂದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಡಿಮೆ ಬಂದಿದ್ದರಿಂದ, ಅದನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದೆಯೇ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ವಿರೇಚಾರಿಯೇ ಎಂಬುದು ಇತ್ಯರ್ಥವಾಗುವವರೆಗೂ ಅವನನ್ನು ಸಸ್‌ಪೆಂಡ್‌ನಲ್ಲಿಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—7 ಪಲ್ಲ 7 ಸೇರಿನಷ್ಟು ಮಾತ್ರ ವ್ಯತ್ಯಾಸ ಬಂದಿತ್ತೋ ಅಥವಾ ಇನ್ನೂ ಹೆಚ್ಚಾಗಿತ್ತೋ?

The Hon'ble Sri T. MARIAPPA.—The whole matter is under examination.

Mr. SPEAKER.—Next question. Sri M. C. Sivananda Sharma.

Claim by Government towards the destination shortages in each Rice Mill in Krishnarajanagar Taluk.

*ಪ್ರಶ್ನೆ 125.—ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಹೆಡ್‌ಕೋಟೆ ಫರ್ಕಾಟು ('ಕಂಟ್ರೋಲ್') ಜಾರಿಗೆ ಬಂದಾಗಿನಿಂದ, ಕೃಷ್ಣರಾಜನಗರ ತಾಲ್ಲೂಕಿನಲ್ಲಿರುವ ಬತ್ತ ಕುಟ್ಟುವ ಗಿರಣಿಗಳಿಂದ ಸರ್ಕಾರದವರ ಅಪ್ಪಣೆಮೇರೆಗೆ ಕಳುಹಿಸಿಕೊಡಲ್ಪಟ್ಟ ಧಾನ್ಯದ ಪರಿಮಾಣಗಳಲ್ಲಿ ಕೊರತೆ ಕಂಡುಬಂದ ಪರಿಮಾಣಗಳ ಸಂಬಂಧದಲ್ಲಿ ಒಟ್ಟು ಎಷ್ಟು ಮೊಬಲಗನ್ನು ನಷ್ಟ ಕಟ್ಟಿಕೊಡಬೇಕೆಂಬುದಾಗಿ ಸರ್ಕಾರದವರು ಹಕ್ಕು ಸಾಧಿಸಿದ್ದಾರೆ;

(b) ಕಳುಹಿಸಿಕೊಡಲ್ಪಟ್ಟ ಎಷ್ಟು ಪ್ರತ್ಯೇಕ ದಾಸ್ತಾನುಗಳಲ್ಲಿ ಕೊರತೆ ಕಂಡುಬಂದಿದ್ದಿತು; ಒಟ್ಟು ಕೊರತೆಬಿದ್ದ ಪರಿಮಾಣವೆಷ್ಟು;

(c) ಈ ದಾಸ್ತಾನುಗಳು ಬಂದು ಸೇರಬೇಕಾಗಿದ್ದ ಸ್ಥಳಕ್ಕೆ ಅವುಗಳನ್ನು ಕಳುಹಿಸಿಕೊಟ್ಟ ನಂತರ ಯಾವ ಸ್ಥಾನದಲ್ಲಿ ಕೊರತೆಯಿರುವುದು ತಿಳಿದುಬಂದಿತು; ಅವುಗಳನ್ನು ಕಳುಹಿಸಿಕೊಟ್ಟಮೇಲೆ ಎಷ್ಟು ಕಾಲಾವಧಿ ಕಳೆದಮೇಲೆ ಕೊರತೆ ಇದ್ದುದು ಕಂಡುಬಂದಿತು; ಬತ್ತದ ಗಿರಣಿಗಳ ವಾಲೀಕರುಗಳಿಗೆ ಈ ಕೊರತೆಗಳ ವಿಚಾರವನ್ನು ಯಾವಾಗ ತಿಳಿಯಪಡಿಸಲಾಯಿತು;

(d) ಅವುಗಳನ್ನು ಯಾರ ಯಾರ ವಿಚಾರಣೆಗೆ ಕಳುಹಿಸಿಕೊಡಲಾಗಿದ್ದಿತು; ಕಳುಹಿಸಿಕೊಟ್ಟವರು ಯಾರು ಯಾರು?